ದಿನಾಂಕಃ **16.12.2020** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.

<u>ಪಾಟೀಸವಾಲುಃ 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದಃ</u>

**17.** 2 ನೇ ಪ್ರತಿವಾದಿ ಸಲ್ಲಿಸಿರುವ ಲಿಖಿತ ತಕರಾರನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಈ ನ್ಯಾಯಾಲಯದಲ್ಲಿ ಭೂ ಸ್ವಾಧೀನಕ್ಕೆ ಸಂಬಂಧಪಟ್ಟ ಹಾಗೆ ಪರಿಹಾರದ ಹಣವನ್ನು ಇದೇ ನ್ಯಾಯಾಲಯದಲ್ಲಿ ನಾನು ಮತ್ತು **1** ಮತ್ತು **2** ನೇ ಪ್ರತಿವಾದಿಗಳು ಪಡೆದುಕೊಂಡಿದ್ದೇವೆ ಎಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ ಮತ್ತು ಮೃತಪಟ್ಟ ನಂತರದ ಕಾಲದಲ್ಲಿ ಪರಿಹಾರದ ಹಣವನ್ನು ಆಸ್ತಿಯ ಭಾಗಕ್ಕೆ ಬದಲಾಗಿ ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಃ **60** ರಲ್ಲಿ ನನ್ನ ಅಣ್ಣ **1** ನೇ ಪ್ರತಿವಾದಿಗೆ **2** ಎಕರೆ **18** ಗುಂಟೆ ಸಾಗುವಳಿಯಲ್ಲಿ ಬಂದಿದೆ ಎಂದರೆ ಸರಿಯಲ್ಲ. ಕೆಂಡಗಣ್ಣೇಗೌಡ ಬಿನ್ ಕೆಂಪೇಗೌಡ, ಅಸ್ವಾಳು ಎಂದರೆ ನನ್ನ ಅಣ್ಣ ಎಂದರೆ ಸರಿ. ಸಾಕ್ಷಿಗೆ ನಿಮ್ಮ ಅಣ್ಣ ಕೆಂಡಗಣ್ಣೇಗೌಡರಿಗೆ ಸದರಿ ಜಮೀನು ಮಂಜೂರು ಆಗಿದೆಯೂ ಇಲ್ಲವೂ ಎಂದು ಕೇಳಲಾಗಿ ಸಾಕ್ಷಿ ಗೊತ್ತಿಲ್ಲ ಎನ್ನುತ್ತಾರೆ.

**18.** ನನ್ನ ಅಣ್ಣ **1** ನೇ ಪ್ರತಿವಾದಿ ಕೆಲಸಕ್ಕೆ ಸೇರಿದ ದಿನಾಂಕ ನಿಖರವಾಗಿ ನನಗೆ ಗೊತ್ತಿಲ್ಲ. ಅವರು ಕೆಲಸಕ್ಕೆ ಸೇರಿದ ನಂತರ ದಿಃ **17.05.1995** ರಲ್ಲಿ ಸದರಿ ಜಮೀನು ಅವರಿಗೆ ಮಂಜೂರಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸದರಿ **2** ಎಕರೆ **18** ಗುಂಟೆಯನ್ನು ಈ ದಾವೆಯಲ್ಲಿ ಸೇರಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ನನ್ನ ತಂದೆಗೆ ಸೇರಿದ ಆಸ್ತಿಗೆ ಮಾತ್ರ ಹಾಕಿಕೊಂಡಿದ್ದೇನೆ ಎನ್ನುತ್ತಾರೆ.

(ಈ ಹಂತದಲ್ಲಿ ಪಕ್ಷಗಾರರ ಪರ ವಕೀಲರು ರಾಜಿ ಆಗಬಹುದು ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದು ಲೋಕ್-ಆದಾಲತ್ ನಲ್ಲಿ ತೀರ್ಮಾನಿಸಲು ಕೋರಿಕೊಂಡಿದ್ದು ಮುಂದುವರೆದ ಪಾಟೀಸವಾಲನ್ನು ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹುಣಸೂರು.